2	ಶಿಗ್ಗಾಂವ್ ಕಲ್ಚರಲ್ ಆಪರೇಶನ್	4"X6" ಅಳತೆಯ ಸಸಿ ಬೆಳಸುವಿಕೆ 10900 ಸಂಖ್ಯೆ	8,150
3	ಸವಣೂರು ತಾಲ್ಲೂಕು ಕಳಲ್ಯೊಂಡ ಸ ನಂ 83, ಎಸ್‌ಜಿಆರ್‌ವೈ 20%	5 ಹೆ ಪ್ರದೇಶದಲ್ಲಿ ನೆಡುತೋಮ ಬೆಳೆಸುವುದು	123,200
4	ಶಿಗ್ಗಾಂವ ಹಳವತಾರಲ್ ಘಟ್ಟ ಸ ನಂ 37 ಎಸ್‌ಜಿಆರ್‌ವೈ 20%	5 ಹೆ ಪ್ರದೇಶದಲ್ಲಿ ನೆಡುತೋಪು ಬೆಳೆಸುವುದು	123,200
	2006–07		
1	ಸವಣೂರು ತಾಲ್ಲೂಕು ಕಳಲ್ಯೊಂಡ ಸ ನಂ 83, ಎಸ್‌ಜಿಆರ್‌ವೈ 20%	5 ಹೆ ಪ್ರದೇಶದಲ್ಲಿ ನೆಡುತೋಮ ನಿರ್ವಹಣೆ	22,000
2	ಶಿಗ್ಗಾಂವ್ ಹಳಾವತಾರಲ್ ಘಟ್ಟ ಸ ನಂ 37 ಎಸ್‌ಜಿಆರ್‌ವೈ 20%	5 ಹೆ ಪ್ರದೇಶದಲ್ಲಿ ನೆಡುತೋಮ ನಿರ್ವಹಣೆ	28,100

ಈ) ಇಲಾಖೆಯ ಯೋಜನೆಗಳಿಗೆ ಆಯಾ ವಿಭಾಗದ ಮತ್ತು ಅಗತ್ಯತೆ ಆಧಾರದ ಮೇಲೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ

ಉ) ಈಗಾಗಲೇ ಮೇಲೆ ವಿವರಿಸಿದಂತೆ ಕ್ರಮ ತೆಗೆದುಕೊಳ್ಳಲಾಗಿದೆ

*811 (564) ಶ್ರೀ ಸುರೇಶ್ ಎಸ್ ಮಾರಿಹಾಳ (ಕಿತ್ತೂರು) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಿತ್ತೂರು ಮತಕ್ಷೇತ್ರದ ಗ್ರಾಮಗಳಾದ ಕಟತನಾಳ, ಇಟಗಿ, ಕಾದ್ರೊಳ್ಳಿ, ಗಂದಿಗವಾಡ ಹಾಗೂ ದೇವರಶೀಗಿಹಳ್ಳಿ ಹತ್ತಿರ ಮಲಪ್ರಭಾ ನದಿಗೆ ಬಂದಾರಗಳನ್ನು ನಿರ್ಮಿಸಿ ಕೆರೆಗಳನ್ನು ತುಂಬಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ ,

ಇ) ಇದರ ಅಂದಾಜು ವೆಚ್ಚವೆಷ್ಟು , (ವಿವರ ನೀಡುವುದು) ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಅ) ಬಂದಿದೆ

ಆ) ಮತ್ತು ಇ) ಯೋಜನೆಯ ಪ್ರಾಥಮಿಕ ತನಿಖಾ ವರದಿಯನ್ನು ತಯಾರಿಸಲು ಸೂಚಿಸಲಾಗಿದ್ದು, ಪ್ರಾಥಮಿಕ ತನಿಖೆ ಕೈಗೊಂಡ ನಂತರ ಯೋಜನೆಯ ತಾಂತ್ರಿಕ ಹಾಗೂ ಆರ್ಥಿಕ ಶಕ್ಯತೆಯನ್ನು ಅವಲಂಬಿಸಿ ಅಂದಾಜು ವೆಚ್ಚವನ್ನು ನಿರ್ಧರಿಸಬಹುದಾಗಿದೆ

812 (545) ಶ್ರೀ ತಿಮ್ಮರಾಯಪ್ಪ ಕೆ ಎಂ (ಪಾವಗಡ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬರಗಾಲದಿಂದ ತತ್ತರಿಸಿರುವ ಬೆಳೆ ವಿಮಾ ರಹಿತ ರೈತರಿಗೆ ಎಕರೆವಾರು ಬೆಳೆ ನಷ್ಟ ಪರಿಹಾರ ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ,

ಆ) ಆಂಧ್ರಪ್ರದೇಶದಲ್ಲಿ ಶೇಂಗಾ ಬೆಳೆಯುವ ರೈತರಿಗೆ ಪರಿಹಾರ ನೀಡಿದಂತೆ ಈ ರಾಜ್ಯದ ರೈತರುಗಳಿಗೆ ಪರಿಹಾರ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ,

ಇ) ಹಾಗಿಲ್ಲದಿದ್ದಲ್ಲಿ, ರೈತರು ಸಂಕಷ್ಟಕ್ಕೆ ಈಡಾಗುತ್ತಾರೆಂಬ ಅಂಶ ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) 50%ಕ್ಕಿಂತ ಹೆಚ್ಚು ಬೆಳೆ ನಷ್ಟ ಸಂಭವಿಸಿದ ಪ್ರಕರಣಗಳಲ್ಲಿ ಸಣ್ಣ ಮತ್ತು ಅತಿ ಸಣ್ಣ ಬೆಳೆ ವಿಮಾರಹಿತ ರೈತರಿಗೆ ಪ್ರಕೃತಿ ವಿಕೋಪ ಮಾರ್ಗಸೂಚಿಗಳನ್ವಯ ಪರಿಹಾರ ನೀಡಲು ಅವಕಾಶವಿದೆ

ಆ) ಈ ಪ್ರಶ್ನೆಯ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

813 (1243) ಶ್ರೀ ವೈಜ್ಯನಾಥ ಪಾಟೀಲ್ (ಚಿಂಚೋಳಿ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಾರಾಯಿ ನಿಷೇಧದ ಪ್ರಸ್ತಾವನೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ ,

ಆ) ಸಾರಾಯಿ ಮಾರಾಟದಿಂದ ಸರ್ಕಾರಕ್ಕೆ ಪ್ರತಿ ವರ್ಷ ಸಂದಾಯವಾಗುವ ಸರಾಸರಿ ಮೊತ್ತವೆಷ್ಟು ,

ಇ) ಸಾರಾಯಿ ನಿಷೇಧದಿಂದಾಗುವ ನಷ್ಟದ ಭರ್ತಿಗಾಗಿ ಸರ್ಕಾರ ಕಂಡುಕೊಂಡಿರುವ ಪರ್ಯಾಯ ಆದಾಯದ ಮೂಲಗಳು ಯಾವುವು ,

ಈ) ಅಂತಹ ಆದಾಯ ತರುವ ಮೂಲಗಳನ್ನು ಸರ್ಕಾರ ಗುರುತಿಸುವ ಕಾರ್ಯದಲ್ಲಿ ಮಗ್ನವಾಗಿದೆಯೇ ?